## ೧೦.೧೦.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೬ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೧೬ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಕ್ಟೋಬರ್ ೧೦, ೨೦೧೩ರ ಗುರುವಾರ ಮಧ್ಯಾಹ್ನ ೦೩.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಕೆ.ಆರ್. ರಾಮಕೃಷ್ಣ,** ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಶ್ರೀ ಬಿ.ಎ. ರಾಜಶೇಖರ್,** ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೫. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೬. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೭. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೮. | **ಪ್ರೊ. ಪಿ.ಬಿ. ಸಂತಪ್ಪನವರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಜಂಟಿ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹದಿನೈದನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 14.06.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಹದಿನೈದನೆಯ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ನಾಲ್ವರು ಹಿರಿಯ ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ ಉಪಾಧಿಯನ್ನು ಪ್ರದಾನ ಮಾಡಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **249 ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ** ಹಾಗೂ **166 ವಿದ್ಯಾರ್ಥಿಗಳಿಗೆ ಎಂ.ಎ. ವಿದ್ವದುತ್ತಮಾ** ಉಪಾಧಿಯನ್ನು ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟಶ್ರೇಣಿ ಪಡೆದು ಉತ್ತೀರ್ಣರಾದ ಒಂಭತ್ತು ಮಂದಿ ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ಘಟಿಕೋತ್ಸವದಲ್ಲಿ ನೀಡಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ನೇಮಕಾತಿ ಹೊಂದಿದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: 07.09.2013ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 9ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ ಒಂಭತ್ತನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.09.2013ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಶಿಕ್ಷಣ ಪರಿಷತ್ತಿನ ಒಂಭತ್ತನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 3: 21.09.2013ರಂದು ನಡೆದ ಹಣಕಾಸು ಸಮಿತಿಯ 11ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಹನ್ನೊಂದನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.09.2013ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಹಣಕಾಸು ಸಮಿತಿ ಹನ್ನೊಂದನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 4: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಕಾನೂನು ಸಲಹೆಗಾರರಾಗಿ ಶ್ರೀ ಸಿ. ವೆಂಕಟೇಶ್ – ಇವರನ್ನು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ಶ್ರೀ ಶಾಂತಕುಮಾರ್ ಇವರನ್ನು ನೇಮಿಸುವ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಅನುದಾನಸಹಿತ ಹಾಗೂ ಅನುದಾನರಹಿತ ಪಾಠಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪಾಠಶಾಲೆಗಳಿಗೆ ಸಂಬಂಧಿಸಿದಂತೆ ಹಲವಾರು ವರ್ಷಗಳಿಂದ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬೇಕಾಗಿದ್ದು, ಕಾನೂನು ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಿ. ವೆಂಕಟೇಶ್ ಅವರನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಬಹುದಾಗಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ. ಇವರಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ರೂ. 5000/–ಗಳನ್ನು (ಗೌರವ ಸಂಭಾವನೆ, ಸಾರಿಗೆ ವೆಚ್ಚ ಮತ್ತು ದೂರವಾಣಿ ವೆಚ್ಚಗಳು ಸೇರಿದಂತೆ) ರೂ. 8,000/–ಗಳಿಗೆ ಹೆಚ್ಚಿಸಲು ಅನುಮೋದನೆಗಾಗಿ ಮಂಡಿಸಿದೆ. ಇನ್ನುಳಿದಂತೆ ಬೇರೆ ಪ್ರಕರಣಗಳಲ್ಲಿ ನಿರ್ದೇಶನಾಲಯದ ಪರವಾಗಿ ಕಾರ್ಯನಿರ್ವಹಿಸಲು ಆಯಾ ಪ್ರಕರಣಗಳಿಗೆ ಪ್ರತ್ಯೇಕವಾಗಿ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ.

ಇದೇ ರೀತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ 30 ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಾಲೇಜುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬೇಕಾಗಿದ್ದು, ಕಾನೂನು ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರನ್ನಾಗಿ ವಕೀಲರಾದ ಶ್ರೀ ಶಾಂತಕುಮಾರ್ ಅವರನ್ನು ನೇಮಕ ಮಾಡಿಕೊಳ್ಳಬಹುದಾಗಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ. ಇವರಿಗೆ ಪ್ರತಿ ತಿಂಗಳು ರೂ. 10,000/–ಗಳನ್ನು (ಗೌರವ ಸಂಭಾವನೆ, ಸಾರಿಗೆ ವೆಚ್ಚ ಮತ್ತು ದೂರವಾಣಿ ವೆಚ್ಚಗಳು ಸೇರಿದಂತೆ) ಪಾವತಿಸಬೇಕಾಗಿರುತ್ತದೆ. ಉಳಿದಂತೆ ಬೇರೆ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಪರವಾಗಿ ಕಾರ್ಯನಿರ್ವಹಿಸಲು ಆಯಾ ಪ್ರಕರಣಗಳಿಗೆ ಪ್ರತ್ಯೇಕವಾಗಿ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ.

ನಿರ್ಣಯ: **ಸಭೆಯು ಮೇಲಿನ ಎಲ್ಲ ಅಂಶಗಳನ್ನು ಗಮನಿಸಿತು. ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ಈವರೆಗೂ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸಿ. ವೆಂಕಟೇಶ್ ಅವರನ್ನು ಅಕ್ಟೋಬರ್ 2013ರಿಂದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾಗಿ ಮಾತ್ರ ಕಾರ್ಯನಿರ್ವಹಿಸಲು ಸಭೆ ಸೂಚಿಸಿತು. ಇವರ ಈವರೆಗಿನ ಮಾಸಿಕ ಸಂಭಾವನೆ ರೂ. 5000/–ಗಳಿಂದ ರೂ. 8000/–ಗಳಿಗೆ ಏರಿಸಿ (ಗೌರವ ಸಂಭಾವನೆ, ಸಾರಿಗೆ ವೆಚ್ಚ ಮತ್ತು ದೂರವಾಣಿ ವೆಚ್ಚ ಸೇರಿದಂತೆ) ಅಕ್ಟೋಬರ್ 2013ರಿಂದ ಸದರಿ ಗೌರವ ಸಂಭಾವನೆಯನ್ನು ನೀಡಲು ಒಪ್ಪಿಗೆಯನ್ನು ನೀಡಿತು.**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯದ ನಿಕಾಯ ಮತ್ತು ವಿಭಾಗಗಳ ಕಾನೂನು ಸಲಹೆಗಾರರಾಗಿ ಶ್ರೀ ಶಾಂತಕುಮಾರ್ ಅವರನ್ನು 2013ನೇ ಅಕ್ಟೋಬರ್ ತಿಂಗಳಿನಿಂದ ನೂತನವಾಗಿ ನೇಮಕ ಮಾಡಿಕೊಂಡು ಮಾಸಿಕ ರೂ. 10000/– (ಗೌರವ ಸಂಭಾವನೆ, ಸಾರಿಗೆ ವೆಚ್ಚ ಮತ್ತು ದೂರವಾಣಿ ವೆಚ್ಚ ಸೇರಿದಂತೆ) ನೀಡಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 5: ವಿಶ್ವವಿದ್ಯಾಲಯದ ಅಧಿಕಾರಿಗಳ ಬಾಕಿ ವೇತನ, ವರ್ಗಾವಣೆ ಅನುದಾನ, ವರ್ಗಾವಣೆ ಪ್ರವಾಸ ಭತ್ಯೆ, ನಿಯೋಜನೆ ಭತ್ಯೆ, ಪ್ರಭಾರ ಭತ್ಯೆ – ಮುಂತಾದವುಗಳನ್ನು ಪಾವತಿಸುವ ಬಗೆಗೆ.**

ಟಿಪ್ಪಣಿ: ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ನಾಗೇಶ ಎಸ್. ಡೋಂಗರೆ –ಇವರು ದಿನಾಂಕ: 03.08.2011ರಿಂದ 30.11.2012ರವರೆಗೆ ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೇ, ದಿನಾಂಕ: 14.05.2012 ರಿಂದ 30.11.2012ರ ವರೆಗೆ ವಿಶ್ವವಿದ್ಯಾಲಯದ ಸಹಾಯಕ ಹಣಕಾಸು ಅಧಿಕಾರಿಯ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ. ದಿನಾಂಕ: 30.11.2012ರ ಅಪರಾಹ್ನ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಂಡು ಮಾತೃ ಇಲಾಖೆಗೆ ಹಿಂದಿರುಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಇವರಿಗೆ ಬಾಕಿವೇತನ, ವರ್ಗಾವಣೆ ಅನುದಾನ, ವರ್ಗಾವಣೆ ಪ್ರವಾಸ ಭತ್ಯೆ, ನಿಯೋಜನೆ ಭತ್ಯೆ ಹಾಗೂ ಪ್ರಭಾರ ಭತ್ಯೆ –ಇವುಗಳನ್ನು ಪಾವತಿಸಬೇಕಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವೈ.ಎಸ್. ಸಿದ್ದೇಗೌಡ –ಇವರು ದಿನಾಂಕ: 03.02.2012ರಿಂದ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇವರಿಗೆ ನಿಯೋಜನ ಭತ್ಯೆಯನ್ನು ಪಾವತಿಸಬೇಕಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ.

ವಿಶ್ವವಿದ್ಯಾಲಯದ ಉಪಕುಲಸಚಿವರಾದ ವಿದ್ವಾನ್ ಪಿ.ಆರ್. ಪಾಗೋಜಿ –ಇವರು ದಿನಾಂಕ: 05.12.2012ರಿಂದ ಹಣಕಾಸು ಅಧಿಕಾರಿಯಾಗಿ ಹೆಚ್ಚುವರಿ ಪ್ರಭಾರವನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಭಾರ ಭತ್ಯೆಯನ್ನು ನಿಯಮಾನುಸಾರ ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿತು. ಕುಲಪತಿಗಳ ಆಪ್ತಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಮಾತೃ ಇಲಾಖೆಗೆ ಹಿಂತಿರುಗಿರುವ ಶ್ರೀ ನಾಗೇಶ ಎಸ್. ಡೋಂಗರೆ –ಇವರಿಗೆ ಬಾಕಿವೇತನ, ವರ್ಗಾವಣೆ ಅನುದಾನ, ವರ್ಗಾವಣೆ ಪ್ರವಾಸಭತ್ಯೆಯನ್ನು ಕೆ.ಸಿ.ಎಸ್.ಆರ್. ನಿಯಮಗಳನ್ವಯ ನೀಡಲು ಸಭೆಯು ಅನುಮೋದನೆಯನ್ನು ನೀಡಿತು.**

**ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ವೈ.ಎಸ್. ಸಿದ್ದೇಗೌಡ ಅವರಿಗೆ ನಿಯೋಜನೆ ಭತ್ಯೆ ನೀಡಲು ನಿಯಮಾವಳಿಗಳಲ್ಲಿ ಅವಕಾಶಗಳು ಇಲ್ಲದುದರಿಂದ ಭತ್ಯೆ ನೀಡಲು ಸಾಧ್ಯವಿಲ್ಲವೆಂದು ಸಭೆ ನಿರ್ಣಯಿಸಿತು.**

**ಉಪಕುಲಸಚಿವರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ವಿದ್ವಾನ್ ಪಿ.ಆರ್. ಪಾಗೋಜಿ –ಇವರು ಹಣಕಾಸು ಅಧಿಕಾರಿಯಾಗಿ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ವಾನ್ ಪಿ.ಆರ್. ಪಾಗೋಜಿ ಅವರು ಹಣಕಾಸು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ 05.12.2012ರಿಂದ ಪ್ರಭಾರ ಭತ್ಯೆಯನ್ನು ನಿಯಮಾನುಸಾರ ಪಾವತಿಸಲು ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 6: ಶ್ರೀ ಮಲೆಮಹದೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಕೊಳ್ಳೇಗಾಲ –ಈ ಪಾಠಶಾಲೆಯಲ್ಲಿ ಸಹಶಿಕ್ಷಕರಾದ ಶ್ರೀ ವಿ. ಮಹದೇವಸ್ವಾಮಿ –ಇವರ ನಿಧನದಿಂದ ತೆರವಾದ ಹುದ್ದೆಯನ್ನು ಅನುಕಂಪ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದಕ್ಕೆ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಶ್ರೀ ಮಲೆಮಹದೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಮೈಸೂರು –ಈ ಪಾಠಶಾಲೆಯಲ್ಲಿ ಸಹಶಿಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದ ಶ್ರೀ ವಿ. ಮಹದೇವಸ್ವಾಮಿ –ಇವರ ನಿಧನದಿಂದ ಖಾಲಿಯಾದ ಹುದ್ದೆಯನ್ನು ಅನುಕಂಪ ಆಧಾರದ ಮೇಲೆ ಇವರ ಮಗನಾದ ಶ್ರೀ ಎಂ. ಗುರುಮೂರ್ತಿ –ಇವರನ್ನು ಆಡಳಿತ ಮಂಡಳಿಯು ನೇಮಕಾತಿ ಮಾಡಿಕೊಂಡು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆಡಳಿತ ಮಂಡಳಿಯ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ದಿನಾಂಕ 30.08.2013ರಂದು ಸರ್ಕಾರದ ಪತ್ರದಲ್ಲಿ ನಮ್ಮ ಹಂತದಲ್ಲಿಯೇ ಕ್ರಮ ಜರುಗಿಸುವಂತೆ ಆದೇಶ ನೀಡಿರುವ ಅನ್ವಯ, ಸರ್ಕಾರಿ ಆದೇಶ ಸಂಖ್ಯೆ: ಇಡಿ 98 ಎಸ್‌ಟಿಬಿ 1996; ದಿನಾಂಕ: 28.11.1998ರಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಿರುವುದರಿಂದ, ಆಡಳಿತ ಮಂಡಳಿಯು ನೇಮಕಾತಿ ಪ್ರಾಧಿಕಾರವಾಗಿದ್ದು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನೇಮಕಾತಿ ಅನುಮೋದನೆ ಪ್ರಾಧಿಕಾರವಾಗಿದೆ ಹಾಗೂ ನೇಮಕಾತಿಯನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುತ್ತದೆ. ಸರ್ಕಾರಿ ಆದೇಶದ ಪ್ರಕಾರ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆಸುವ ಆವಶ್ಯಕತೆಯಿರುವುದಿಲ್ಲ. ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 100 SCA 95; ದಿನಾಂಕ: 12.09.1996ರ ಪ್ರಕಾರ ಪ್ರಸ್ತುತ ನೇಮಕಾತಿಯನ್ನು ಅನುಮೋದಿಸಲು ಕಂಡಿಕೆ ಸಂಖ್ಯೆ 34; ದಿನಾಂಕ: 10.09.2013ರ ಮಾನ್ಯ ಕುಲಪತಿಗಳ ಆದೇಶದಂತೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ಎಂ. ಗುರುಮೂರ್ತಿ ಅವರನ್ನು ಅನುಕಂಪದ ಆಧಾರದ ಮೇಲೆ ಸರ್ಕಾರದ ನಿಯಮಗಳಿಗನುಸಾರವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಒಪ್ಪಿಗೆಯನ್ನು ನೀಡಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**ವಿಷಯ 1: ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು, ಶಾಸ್ತ್ರನಿಕಾಯ –ಇವರ ವೇತನ ಸಂರಕ್ಷಣೆ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ಹಾಗೂ ಗಳಿಕೆ ರಜೆ ನಗದೀಕರಣ ನೀಡುವುದಕ್ಕೆ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಡಾ. ಶ್ರೀನಿವಾಸ ವರಖೇಡಿ –ಇವರು ದಿನಾಂಕ: 14.06.2013ರಂದು ಶಾಸ್ತ್ರನಿಕಾಯದ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡಿರುತ್ತಾರೆ. ಇದಕ್ಕೆ ಪೂರ್ವದಲ್ಲಿ ನಿಯೋಜನೆ ಮೇರೆಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ದಿನಾಂಕ: 01.04.2011ರಿಂದ ದಿನಾಂಕ: 14.06.2013ರ ವರೆಗೆ ಕಾರ್ಯನಿರ್ವಹಿಸಿದ್ದು, ಈ ಅವಧಿಯಲ್ಲಿ ಪ್ರಾಧ್ಯಾಪಕ ಹುದ್ದೆಯ ರೂ. 37400–67000+10000AGP ವೇತನಶ್ರೇಣಿಯಲ್ಲಿ ರೂ. 53,354/– ಗಳ ಮೂಲವೇತನ ಪಡೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಹೊಸದಾಗಿ ನೇಮಕವಾದ ಪ್ರಾಧ್ಯಾಪಕ ಹುದ್ದೆಯ ವೇತನಶ್ರೇಣಿ ರೂ. 37400–67000+10000AGPರ ಮೂಲವೇತನ ರೂ. 47,400/– ಬದಲಾಗಿ ಹಿಂದಿನ ವೇತನಶ್ರೇಣಿಯನ್ನು ಸಂರಕ್ಷಣೆ ಮಾಡಿ, ಈ ಹಿಂದೆ ಪಡೆಯುತ್ತಿದ್ದ ಮೂಲವೇತನ ರೂ. 53,354/– ಗಳನ್ನು ಪಾವತಿಸಲಾಗುತ್ತಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ಡಾ. ಶ್ರೀನಿವಾಸ ವರಖೇಡಿ –ಇವರು ಮನವಿಯನ್ನು ಸಲ್ಲಿಸಿ, ತಾವು ನಿಯೋಜನೆ ಮೇರೆಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ದಿನಾಂಕ: 01.04.2011ರಿಂದ ದಿನಾಂಕ: 14.06.2013ರ ಅವಧಿಯಲ್ಲಿ ಸಂಚಿತವಾದ ಗಳಿಕೆ ರಜೆಯ ಒಟ್ಟು ಅವಧಿಯನ್ನು ನಗದೀಕರಿಸಿ ನೀಡುವಂತೆ ಹಾಗೂ ತಮ್ಮ ಮಾತೃಸಂಸ್ಥೆ ಸಂಸ್ಕೃತ ಅಕಾಡೆಮಿಗೆ ನೀಡಬೇಕಾದ ಇತರೆ ಮೊತ್ತವನ್ನು ಕಳುಹಿಸಿಕೊಡಬೇಕೆಂದು ಕೋರಿರುತ್ತಾರೆ.

ಡಾ. ಶ್ರೀನಿವಾಸ ವರಖೇಡಿ –ಇವರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಳ್ಳುವ ಪೂರ್ವದಲ್ಲಿ ಸೇವೆ ಸಲ್ಲಿಸಿದ ಸಂಸ್ಥೆಗಳಿಂದ ತಮ್ಮ ಸೇವಾ ದಾಖಲೆಗಳನ್ನು ಮತ್ತು ಸೇವಾ ಸೌಲಭ್ಯಗಳ ಬಾಕಿ ಮೊತ್ತವನ್ನು (ಪಿಂಚಣಿನಿಧಿ ಇತ್ಯಾದಿ) ತರಿಸಿಕೊಡುವಂತೆ ಮನವಿ ಮಾಡಿರುತ್ತಾರೆ. ಅಲ್ಲದೇ, ತಮ್ಮ ಸೇವೆಯನ್ನು ನೂತನ ಪಿಂಚಣಿನಿಧಿ ಯೋಜನೆಯ ಅಡಿಯಲ್ಲಿ ಪರಿಗಣಿಸಿ, ಪ್ರತ್ಯೇಕ ಪಿಂಚಣಿನಿಧಿ ಖಾತೆಯನ್ನು ತೆರೆಯಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ಅಂಶಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಶಾಸ್ತ್ರನಿಕಾಯದ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡಿರುವ ಡಾ. ಶ್ರೀನಿವಾಸ ವರಖೇಡಿ –ಇವರು ಈ ಹಿಂದೆ ಪಡೆಯುತ್ತಿದ್ದ ವೇತನಶ್ರೇಣಿ ಹಾಗೂ ಮೂಲವೇತನವನ್ನು ಸಂರಕ್ಷಣೆ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಿತು. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ 01.04.2011ರಿಂದ 14.06.2013ರ ಅವಧಿಯಲ್ಲಿ ಇವರ ಮಾತೃಸಂಸ್ಥೆ 'ಸಂಸ್ಕೃತ ಅಕಾಡೆಮಿ, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್' –ಇಲ್ಲಿಗೆ ವಿಶ್ವವಿದ್ಯಾಲಯದಿಂದ ಸಂದಾಯವಾಗಬೇಕಾಗಿರುವ ಮೊತ್ತವನ್ನು ಕಳುಹಿಸಲು ಸಭೆಯು ಒಪ್ಪಿಗೆ ನೀಡಿತು. ನಿಯಮಾನುಸಾರ ಗಳಿಕೆ ರಜೆ ನಗದೀಕರಣಕ್ಕೆ ಅವಕಾಶವಿಲ್ಲವೆಂದು ಸಭೆ ಸೂಚಿಸಿತು. ಆದರೆ, ಇವರು ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವ ಹಿನ್ನೆಲೆಯಲ್ಲಿ, ತತ್‌ಪೂರ್ವದಲ್ಲಿ ಸೇವೆ ಸಲ್ಲಿಸಿದ ಸಂಸ್ಥೆಗಳಿಂದ ಸೇವಾ ದಾಖಲೆ, ಸೇವಾ ಸೌಲಭ್ಯ ಮತ್ತು ಬಾಕಿ ಮೊತ್ತವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ತರಿಸಿಕೊಂಡು, ನೂತನ ಪಿಂಚಣಿನಿಧಿ ಯೋಜನೆಯ ಅಡಿಯಲ್ಲಿ ನಿಯಮಾನುಸಾರ ಪರಿಗಣಿಸಲು ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 2: ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ಖರ್ಚು ಮಾಡಲಾದ ಮೊತ್ತಕ್ಕೆ ಅನುಮೋದನೆ ಪಡೆಯುವುದರ ಬಗೆಗೆ.**

ಟಿಪ್ಪಣಿ: ದಿನಾಂಕ: 14.06.2013ರ ಶುಕ್ರವಾರ ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಸಲಾದ ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ಒಟ್ಟಾರೆ **ರೂ. 5,05,446/–** ಗಳನ್ನು ಖರ್ಚು ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ವಿವರ | ಮೊತ್ತ |
|---|---|---|
| 01. | ಜ್ಞಾನಜ್ಯೋತಿ ಸಭಾಂಗಣವನ್ನು ಕಾಯ್ದಿರಿಸಲು | 69017–00 |
| 02. | ಸಾದಿಲ್ವಾರು ವೆಚ್ಚ | 5253–00 |
| 03. | ಗೌರವ ಡಿ.ಲಿಟ್ ಪುರಸ್ಕೃತರ ಪ್ರಯಾಣಭತ್ಯೆ | 7030–00 |
| 04. | ದೀಕ್ಷಾಂತ ಭಾಷಣ ಮಾಡಿದ ವಿದ್ವಾಂಸರ ಗೌರವ ಸಂಭಾವನೆ ಮತ್ತು ಪ್ರಯಾಣಭತ್ಯೆ | 5000–00 |
| 05. | ಧಾರವಾಡದಲ್ಲಿ ನಡೆದ ಗೌರವ ಡಿ.ಲಿಟ್ ಪ್ರದಾನ ಕಾರ್ಯಕ್ರಮಕ್ಕೆ ಭಾಗವಹಿಸಿದ್ದ ಉಪಕುಲಸಚಿವರ ಪ್ರಯಾಣಭತ್ಯೆ | 1860–00 |
| 06. | ಅತಿ ಹೆಚ್ಚು ಅಂಕ ಪಡೆದ 9 ವಿದ್ಯಾರ್ಥಿಗಳಿಗೆ ನಗದುಪುರಸ್ಕಾರ (ರೂ. 5,000/–ಗಳಂತೆ) | 45000–00 |
| 07. | ಆಮಂತ್ರಣ ಪತ್ರಿಕೆ ಮುದ್ರಣ ವೆಚ್ಚ | 52750–00 |
| 08. | ಆಮಂತ್ರಣ ಪತ್ರಿಕೆಯ ಕೊರಿಯರ್ ಹಾಗೂ ಅಂಚೆ ವೆಚ್ಚ | 5000–00 |
| 09. | ಸ್ಮರಣಿಕೆಗಳು, ಏಲಕ್ಕಿ ಹಾರಗಳಿಗೆ ಆದ ವೆಚ್ಚ | 51167–00 |
| 10. | ಘಟಿಕೋತ್ಸವ ಪ್ರಮಾಣಪತ್ರಗಳ ಮುದ್ರಣ ವೆಚ್ಚ | 34182–00 |
| 11. | ಘಟಿಕೋತ್ಸವ ಪ್ರಮಾಣಪತ್ರಗಳನ್ನು ಹಾಕಿಕೊಡಲು ಫೋಲ್ಡರ್ ಖರೀದಿ ಮತ್ತು ಮುದ್ರಣ ವೆಚ್ಚ | 31650–00 |
| 12. | ಸ್ವಾಗತ ಭಾಷಣ, ದೀಕ್ಷಾಂತ ಭಾಷಣ ಹಾಗೂ ಗೌರವ ಡಿ.ಲಿಟ್ ಪುರಸ್ಕೃತರ ಪರಿಚಯ ಪುಸ್ತಕ ಮುದ್ರಣ ವೆಚ್ಚ | 48439–00 |
| 13. | ಫ್ಲೆಕ್ಸ್ ಬ್ಯಾನರ್‌ಗಳ ಮುದ್ರಣ ಮತ್ತು ವೇದಿಕೆಯ ಅಲಂಕಾರ ವೆಚ್ಚ | 62290–00 |
| 14. | ಘಟಿಕೋತ್ಸವ ಸಮಾರಂಭದ ಫೋಟೊ ಮತ್ತು ಕರಿಷ್ಮಾ ಆಲ್ಬಮ್ ವೆಚ್ಚ | 24750–00 |
| 15. | ವಿಶ್ವವಿದ್ಯಾಲಯದಿಂದ ವಸ್ತುಗಳನ್ನು ಸಾಗಿಸಲು, ಗಣ್ಯವ್ಯಕ್ತಿಗಳನ್ನು ಕರೆದುಕೊಂಡು ಹೋಗಲು ಟೆಂಪೋ ಹಾಗೂ ಕಾರಿಗೆ, ಧಾರವಾಡ ಮತ್ತು ಹೊನ್ನಾವರದಲ್ಲಿ ನಡೆದ ಗೌರವ ಡಿ.ಲಿಟ್ ಕಾರ್ಯಕ್ರಮಕ್ಕೆ ಹೋಗಿಬಂದ ಬಾಡಿಗೆ ಕಾರಿನ ವೆಚ್ಚಗಳು | 23508–00 |
| 16. | ಧಾರವಾಡ ಮತ್ತು ಹೊನ್ನಾವರದಲ್ಲಿ ನಡೆದ ಗೌರವ ಡಿ.ಲಿಟ್ ಕಾರ್ಯಕ್ರಮದ ಫೋಟೊ ಮತ್ತು ಕರಿಷ್ಮಾ ಆಲ್ಬಮ್ ವೆಚ್ಚ | 4800–00 |
| 17. | ಗೌರವ ಡಿ.ಲಿಟ್ ಪ್ರಮಾಣಪತ್ರದ ಫೋಟೋ ಫ್ರೇಮ್ ವೆಚ್ಚ | 4200–00 |
| 18. | ಸಮಾರಂಭಕ್ಕೆ ಭೋಜನ ವ್ಯವಸ್ಥೆ ಮಾಡಿದ ವೆಚ್ಚ | 17000–00 |
| 19. | ಶಾಲುಗಳ ಖರೀದಿ | 12550–00 |
| | **ಒಟ್ಟು ವೆಚ್ಚ** | **5,05,446–00** |

ದಿನಾಂಕ: 28.03.2013ರಂದು ನಡೆದ ಪ್ರಶಾಸನ ಸಮಿತಿ 13ನೇ ಸಭೆಯಲ್ಲಿ ಚರ್ಚಿತವಾದ ವಿಷಯ ಸಂಖ್ಯೆ: 2ರಲ್ಲಿ **6.00 ಲಕ್ಷ ರೂ.** ಗಳಿಗೆ ಅನುಮೋದನೆ ಪಡೆಯಲಾಗಿತ್ತು. ಈ ಸಮಾರಂಭಕ್ಕೆ ತಗುಲಿದ ಒಟ್ಟಾರೆ ವೆಚ್ಚ **ರೂ. 5,05,446/–**ಗಳಿಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಸಮಗ್ರವಾಗಿ ಪರಿಶೀಲಿಸಿ ಘಟಿಕೋತ್ಸವ ಸಮಾರಂಭಕ್ಕೆ ತಗುಲಿದ ಒಟ್ಟು ವೆಚ್ಚಕ್ಕೆ ಅನುಮೋದನೆಯನ್ನು ನೀಡಿತು.**

## ವಿಷಯ 3: ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ

ಟಿಪ್ಪಣಿ: ದಿನಾಂಕ: 26.05.2013ರಂದು ನಡೆದ ಪ್ರಶಾಸನ ಸಮಿತಿ ಹದಿನಾಲ್ಕನೇ ಸಭೆಯ ನಿರ್ಣಯದಂತೆ ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿದ್ದ ರಾಜ್ಯ ವೇತನಶ್ರೇಣಿಯ ಬೋಧಕೇತರ **ವಿಶ್ರಾಂತಿಗೃಹ ಮೇಲ್ವಿಚಾರಕ ಮತ್ತು ಕಾವಲುಗಾರ** ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 2013ರ ಅಕ್ಟೋಬರ್ 09ರಂದು ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕೇತರ ವಿಶ್ರಾಂತಿಗೃಹ ಮೇಲ್ವಿಚಾರಕ ಹಾಗೂ ಗ್ರೂಪ್ 'ಡಿ' (ಕಾವಲುಗಾರ) ಹುದ್ದೆಗಳಿಗೆ ದಿನಾಂಕ: 09 ಅಕ್ಟೋಬರ್ 2013ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

| ಕ್ರ.ಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | **ವಿಶ್ರಾಂತಿಗೃಹ ಮೇಲ್ವಿಚಾರಕ** | **ಎಸ್. ಸಿದ್ದಯ್ಯ**<br>S/o. ಲೇಟ್ ಸಿದ್ದಯ್ಯ<br>ಮುಳ್ಳೂರು ಗ್ರಾಮ, ಗೋಪಾಲಪುರ ಅಂಚೆ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು | ಪರಿಶಿಷ್ಟ ಜಾತಿ |
| **02.** | **ಕಾವಲುಗಾರ** | **ಜೆ.ಬಿ. ಕುಮಾರ**<br>S/o. ಬೋರಯ್ಯ ಜಿ.<br>ಬಚ್ಚಬೋರನಹಟ್ಟಿ, ಗೋನೂರು ಅಂಚೆ,<br>ಚಿತ್ರದುರ್ಗ ತಾಲ್ಲೂಕು – 577517 | ಪರಿಶಿಷ್ಟ ಪಂಗಡ |
| **03.** | **ಕಾವಲುಗಾರ** | **ವಶೀಮಕ್ರಮ್ ತಹಸೀಲ್ದಾರ್**<br>S/o. ನಜೀರ್ ಅಹಮದ್<br>ಉಪಾಸನಗೇರಿ ಓಣಿ, ಸವದತ್ತಿ, ಬೆಳಗಾವಿ ಜಿಲ್ಲೆ – 591126 | ಪ್ರವರ್ಗ 2ಬಿ |

**ಪ್ರೊ. ಪಿ.ಬಿ. ಸಂತಪ್ಪನವರ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು